# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ-577415, ಶಿವಮೊಗ್ಗ, ಕರ್ನಾಟಕ.

Phone No: 08282-256166, mob: 7022254993ಇ-ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in


ಸಂಖ್ಯೆ: ಕುವಿ/ಪವಿ/ಪಿಜಿ/7488/2023-24 ದಿನಾಂಕ: 26-12-2023

## ಪ್ರಕಟಣೆ

**ವಿಷಯ:** ಜನವರಿ-2024ರ ಮಾಹೆಯಲ್ಲಿ ನಡೆಯುವ ವಿವಿಧ ಸ್ನಾತಕೋತ್ತರ ಪದವಿಗಳ (ರೆಗ್ಯುಲರ್) ಪ್ರಥಮ ಸೆಮಿಸ್ಟರ್ (ರಿಪೀಟರ್ಸ್) ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1) ಈ ಕಛೇರಿ ಪರೀಕ್ಷಾ ಪ್ರಕಟಣೆ ಸಂಖ್ಯೆ: ಕುವಿ/ಪವಿ/ಪಿಜಿ/4868/2023-24. ದಿನಾಂಕ: 26-09-2023
2) ಈ ಕಛೇರಿ ಪರೀಕ್ಷಾ ಸುತ್ತೋಲೆ ಸಂಖ್ಯೆ: ಕುವಿ/ಪವಿ/ಪಿಜಿ/5239/2023-24. ದಿನಾಂಕ: 16-10-2023
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:21-12-2023

*****

ಕುವೆಂಪು ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಪದವಿಗಳ ಮೇ- 2023ರ ಮಾಹೆಯಲ್ಲಿ ನಡೆದ ಪ್ರಥಮ ಸೆಮಿಸ್ಟರ್ ರಿಪೀಟರ್ಸ್ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸದೇ ಇರುವುದರಿಂದ, ಸದರಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಿದ ನಂತರವೇ **ಅಕ್ಟೋಬರ್/ನವಂಬರ್-2023**ರ ಮಾಹೆಯ ಪ್ರಥಮ ಸೆಮಿಸ್ಟರ್ ರಿಪೀಟರ್ಸ್ ವಿದ್ಯಾರ್ಥಿಗಳ ಪರೀಕ್ಷೆಯನ್ನು ನಡೆಸಲು ಹಾಗೂ ಈ ಬಗ್ಗೆ ಪ್ರತ್ಯೇಕವಾಗಿ ಪರೀಕ್ಷಾ ದಿನಾಂಕವನ್ನು ನಿಗದಿಪಡಿಸಿ, ಮೇಲ್ಕಂಡ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ಎಲ್ಲಾ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಅಧಿಸೂಚನೆಯನ್ನು ಹೊರಡಿಸಿ ಕ್ರಮ ಕೈಗೊಳ್ಳಲಾಗುವುದೆಂದು ಉಲ್ಲೇಖ 02ರ ಈ ಕಛೇರಿ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು.

ಅದರಂತೆ, ಮೇ - 2023ರ ಮಾಹೆಯಲ್ಲಿ ನಡೆದ ಪ್ರಥಮ ಸೆಮಿಸ್ಟರ್ (ರೆಗ್ಯುಲರ್ & ರಿಪೀಟರ್ಸ್) ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಈ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ಎಲ್ಲಾ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಪರೀಕ್ಷೆಗಳು **ದಿನಾಂಕ:22-01-2024**ರಿಂದ ಪ್ರಾರಂಭವಾಗುತ್ತವೆ.

**ಲಿಖಿತ ಪರೀಕ್ಷೆಗಳಿಗೆ ನಿಗದಿಪಡಿಸಿದ ಶುಲ್ಕ ಮತ್ತು ವೇಳಾಪಟ್ಟಿ ವಿವರಗಳು ಈ ಕೆಳಗಿನಂತಿರುತ್ತವೆ.**

| ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು: | | |
|---|---|---|
| 1) | ವಿಳಂಬ ಶುಲ್ಕವಿಲ್ಲದೆ | 26-12-2023 ರಿಂದ 05-01-2024 ರವರೆಗೆ |
| 2) | ವಿಳಂಬ ಶುಲ್ಕ ₹ 100=00ರಂತೆ | 06-01-2024 ರಿಂದ 08-01-2024 ರವರೆಗೆ |
| 3) | ವಿಳಂಬ ಶುಲ್ಕ ₹. 500=00ರಂತೆ | 09-01-2024 ರಿಂದ 10-01-2024 ರವರೆಗೆ |
| 4) | **ಉಲ್ಲೇಖ 01ರ ಈ ಕಛೇರಿ ಪರೀಕ್ಷಾ ಪ್ರಕಟಣೆಯನ್ವಯ, ಅಕ್ಟೋಬರ್/ ನವಂಬರ್ - 2023ರ ಮಾಹೆಯಲ್ಲಿ ಈಗಾಗಲೇ ಪ್ರಥಮ ಸೆಮಿಸ್ಟರ್ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳು (ರಿಪೀಟರ್ಸ್) ಮತ್ತೊಮ್ಮೆ ಶುಲ್ಕ ಪಾವತಿಸುವ ಅವಶ್ಯಕತೆ ಇರುವುದಿಲ್ಲ.** | |

| ಪರೀಕ್ಷಾ ಶುಲ್ಕದ ವಿವರ | | | | | |
|---|---|---|---|---|---|
| | | ವಿಶೇಷ ಶುಲ್ಕ (ಪ್ರತಿ ಪತ್ರಿಕೆಗೆ) | ಪರೀಕ್ಷಾ ಶುಲ್ಕ (ಪ್ರತಿ ಪತ್ರಿಕೆಗೆ) | ಅಂಕಪಟ್ಟಿ ಶುಲ್ಕ | ಒಟ್ಟು ಶುಲ್ಕ |
| 1) | ಪ್ರತಿ ಪತ್ರಿಕೆಗೆ ಪರೀಕ್ಷೆಗೆ (ಪ್ರಾಯೋಗಿಕ / ಸೈದ್ಧಾಂತಿಕ) | ₹ 2040/- | ₹ 465/- | ₹ 265/- | ₹2770/- |

| ಜನವರಿ – 2024ರ ಮಾಹೆಯಲ್ಲಿ ನಡೆಯಲಿರುವ ಸ್ನಾತಕೋತ್ತರ ಪದವಿಗಳ ಪ್ರಥಮ ಸೆಮಿಸ್ಟರ್ (Repeaters) ಸೈದ್ಧಾಂತಿಕ ಪರೀಕ್ಷೆಗಳ ವೇಳಾಪಟ್ಟಿ ವಿವರ | |
|---|---|
| Time: 10.00am to 1.00pm | |
| ಪತ್ರಿಕೆ 01 | 22–01–2024 – ಸೋಮವಾರ |
| ಪತ್ರಿಕೆ 02 | 23–01–2024 – ಮಂಗಳವಾರ |
| ಪತ್ರಿಕೆ 03 | 24–01–2024 – ಬುಧವಾರ |
| ಪತ್ರಿಕೆ 04 | 25–01–2024 – ಗುರುವಾರ |
| ಪತ್ರಿಕೆ 05 | 27–01–2024 – ಶನಿವಾರ |
| ಪತ್ರಿಕೆ 06 | 29–01–2024 – ಸೋಮವಾರ |
| ಪತ್ರಿಕೆ 07 | 30–01–2024 – ಮಂಗಳವಾರ |
| ಪತ್ರಿಕೆ 08 | 31–01–2024 – ಬುಧವಾರ |

**ಸೂಚನೆಗಳು:**

1) ಮೇಲ್ಕಂಡ ವೇಳಾಪಟ್ಟಿಯಲ್ಲಿ ನಮೂದಿಸಲಾಗಿರುವ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ವೇಳಾಪಟ್ಟಿಯು ನಾಲ್ಕನೇ ಸೆಮಿಸ್ಟರ್ ವ್ಯಾಸಂಗ ಮಾಡಿ ಅಕ್ಟೋಬರ್/ನವೆಂಬರ್ – 2023ರಲ್ಲಿ ಪರೀಕ್ಷೆ ಬರೆದಿರುವ ಹಾಗೂ ಕೋರ್ಸ್ ಮುಗಿದ ವಿದ್ಯಾರ್ಥಿಗಳು ತಮ್ಮ ಹಿಂದಿನ ಸೆಮಿಸ್ಟರ್‌ನ ಪತ್ರಿಕೆಗಳಲ್ಲಿ ಅನುತ್ತೀರ್ಣಗೊಂಡು ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ.
2) ಸಂಯೋಜಿತ/ ಘಟಕ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಭಾಗಗಳಿದ್ದಲ್ಲಿ ವಿಭಾಗದ ಮುಖ್ಯಸ್ಥರು ಸದರಿ ಮಾಹೆಯಲ್ಲಿ ನಡೆಯುವ ಸೈದ್ಧಾಂತಿಕ ಪರೀಕ್ಷೆಯ (Freshers & Repeaters) ವಿಶ್ವವಿದ್ಯಾಲಯದ ಅನುಮೋದನೆ ಪಡೆದಂತಹ ವೇಳಾಪಟ್ಟಿಯ ಪ್ರತಿಯನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸಿಕೊಡಲು ಕ್ರಮ ಕೈಗೊಳ್ಳುವುದು.

ಪ್ರಥಮ ಸೆಮಿಸ್ಟರ್ ರಿಪೀಟರ್ಸ್ ಪರೀಕ್ಷೆಗಳ ಪರೀಕ್ಷಾ ಶುಲ್ಕಗಳನ್ನು UUCMS ಮತ್ತು ಲಾಜಿಸಿಸ್ ತಂತ್ರಾಂಶದ ಮೂಲಕ ಪಾವತಿಸಲು ಸಾಧ್ಯಾವಾಗದ ಕಾರಣ Manual ಆಗಿ ವಿಶ್ವವಿದ್ಯಾಲಯದ SBI, ಜ್ಞಾನ ಸಹ್ಯಾದ್ರಿ ಶಾಖೆ, ಪರೀಕ್ಷಾ ಖಾತೆ ಸಂಖ್ಯೆ: F&R A/c No: 54023036246, **I.F.S.C. Code:** SBIN0040759,ಗೆ ಜಮಾ ಮಾಡಿದ ಮೂಲ ಚಲನ್‌ನೊಂದಿಗೆ ಪರೀಕ್ಷಾ ಅರ್ಜಿಯನ್ನು ಕಾಲೇಜಿನ ಪ್ರಾಂಶುಪಾಲರು/ ವಿಭಾಗದ ಅಧ್ಯಕ್ಷರ ಸಹಿ ಮತ್ತು ಮೊಹರಿನೊಂದಿಗೆ ಸಲ್ಲಿಸುವುದು.

ಮೇಲ್ಕಂಡಂತೆ, ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿದ ಮೂಲ ಚಲನ್‌ನೊಂದಿಗೆ ಈ ಕೆಳಕಂಡ ನಮೂನೆ ವಿವರದಂತೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

| ಕ್ರ. ಸಂ | ವಿದ್ಯಾರ್ಥಿಯ ಹೆಸರು | ನೋಂದಣಿ ಸಂಖ್ಯೆ | ಕೋರ್ಸ್ | ಕ್ಯೂ ಪಿ. ಕೋಡ್ | ಪರೀಕ್ಷೆ ತೆಗೆದುಕೊಂಡ ಪತ್ರಿಕೆಯ ಹೆಸರು | ಶುಲ್ಕಗಳ ವಿವರ ಮತ್ತು ದಿನಾಂಕ |
|---|---|---|---|---|---|---|
| | | | | | | |
| | | | | | | |

ವಿದ್ಯಾರ್ಥಿಗಳ ಮಾಹಿತಿಯನ್ನು ಸಲ್ಲಿಸಿದ ನಂತರವೇ ಪರೀಕ್ಷಾ ಪ್ರವೇಶ ಪತ್ರಗಳ ಮುದ್ರಣನ್ನು ಆನ್‌ಲೈನ್‌ನಲ್ಲಿ ಅನುಮತಿಸುವುದು.

- ಸೈದ್ಧಾಂತಿಕ ಪರೀಕ್ಷೆ ನಡೆಸಲು ಬೇಕಿರುವ ಪ್ರಶ್ನೆ ಪತ್ರಿಕೆಗಳ / ಉತ್ತರ ಪತ್ರಿಕೆಗಳ ಮುದ್ರಿತ ನಮೂನೆಗಳು ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಗಳನ್ನು **ದಿನಾಂಕ:08–01–2024ರೊಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.**

ಮೇಲ್ಕಂಡ ಮಾಹಿತಿಯನ್ನು ಸಂಬಂಧಿಸಿದ ವಿದ್ಯಾರ್ಥಿಗಳ ಗಮನಕ್ಕೆ ಕಡ್ಡಾಯವಾಗಿ ತರುವುದು.

ಕುಲಸಚಿವ (ಪರೀಕ್ಷಾಂಗ)
ಕುಲಸಚಿವರು(ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾಲಯ